**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು**

**ಸಿ.ಸಿ.ಸಂಖ್ಯೆ: 840-17**

**ದಿಃ 22-03.-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

| | | | |
|---|---|---|---|
| ಹೆಸರು | ಮಂಜಣ್ಣ | ಸಿಡಬ್ಲ್ಯು | 8 |
| ವಯಸ್ಸು | 38 | ಪಿಡಬ್ಲ್ಯು | 5 |
| ತಂದೆ:ಗಂಡನ ಹೆಸರು | ಚಿಕ್ಕಗಂಗಪ್ಪ | ಪ್ರಮಾಣೀಕರಿಸಲಾದ ದಿನಾಂಕ 22-03-2022. | |
| ವೃತ್ತಿ | ವ್ಯವಸಾಯ | | |
| ವಾಸಸ್ಥಳ | ಇಡುಗೂರು | | |
| ಸಮಯ | | | |

**ಮುಖ್ಯ ವಿಚಾರಣೆ:: ಎಪಿಪಿರವರಿಂದಃ**

ಸುಮಾರು 6 ವರ್ಷಗಳ ಹಿಂದೆ ನಾಗಸಂದ್ರದ ಅಂಜಿನಪ್ಪ ರವರು ಅಪಘಾತದ ಕಾರಣ ಆಸ್ಪತ್ರೆಯಲ್ಲಿ ಮೃತರಾಗಿದ್ದು , ಸದರಿ ಅಪಘಾತವು ದ್ವಿಚಕ್ರ ವಾಹನದಿಂದ ಸಂಭವಿಸಿರುತ್ತದೆ . ಸುಮಾರು ಬೆಳ್ಳಿಗ್ಗೆ 11.00 ಗಂಟೆ ಸಮಯಕ್ಕೆ ಅವರು ಶವ ಪಂಚನಾಮೆ ಕ್ರಮ ನಡೆದಿರುತ್ತದೆ . ಸಾಕ್ಷಿಗೆ ಶವ ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದರು . (ಸದರಿ ಶವ ಪಂಚನಾಮೆಯನ್ನು 8 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 8(ಎ)ಎಂದು ಗುರುತಿಸಲಾಯಿತು. ) ನಿಪಿ 8 ಕ್ಕೆ ಚಾಸಾ 7 ಮತ್ತು ಚಾಸಾ 8 ಸಹ ಸಹಿ ಮಾಡಿರುತ್ತಾರೆ .

**ಪಾಟೀ ಸವಾಲು:: ಶ್ರೀ ವಿ ಜಿ ಎನ್ ಆರೋಪಿ ಪರ ರವರಿಂದಃ**

ಮೃತ ಆಂಜಿನಪ್ಪ ನನ್ನ ಬಾಮೈದ . ಪೋಲೀಸ್ ರವರು ಸಾಕ್ಷ್ಯಾ ಹೇಳಲು ನನಗೆ ನೋಟೀಸು ನೀಡಿದ್ದರು . ನನಗೆ ಪೋಲೀಸರು ಸಾಕ್ಷ್ಯಾ ಹೇಳಲು ನೋಟೀಸು ಕೊಟ್ಟಿರಲಿಲ್ಲಾ ಎಂದರೆ ಸರಿಯಲ್ಲ. ಇದೇ ತಿಂಗಳ 17 ರಂದು ಪೋಲೀಸರು ನನಗೆ ನೋಟೀಸು ನೀಡಿರುತ್ತಾರೆ . ನಿಪಿ 8 ಬರೆಯಲು ಯಾರು ಮಾಹಿತಿ ನೀಡಿದರು

ಎಂದು ನನಗೆ ಗೊತ್ತಿಲ್ಲ. ನಿಪಿ 8 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಅಪಘಾತ ನಡೆದಿರುವುದನ್ನು ಖುದ್ದಾಗಿ ನೋಡಿರುವುದಿಲ್ಲ. ನಾನು ನಿಪಿ 8 ಕ್ಕೆ ಆಸ್ಪತ್ರೆಯಲ್ಲಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಮೃತ ವ್ಯಕ್ತಿಯು ನನ್ನ ಖಾಸ ಬಾಮೈದ ರಾಗಿದ್ದು ಹಾಗಾಗಿ ನಾನು ನಿಪಿ 8 ಕ್ಕೆ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದರು , ಆಸ್ಪತ್ರೆಯಲ್ಲಿ ಸಹಿಮಾಡಿರುವುದಾಗಿ ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸ ಇದೆ**

ಅಸಿನ್ಯಾ.ಜೆಎಂಎಫ್‌ಸಿ,ಗೌರಿಬಿದನೂರು.